QCA : 155

(ಅಭ್ಯರ್ಥಿಯೇ ಭರ್ತಿ ಮಾಡಬೇಕು / To be filled by the candidate)

ನೊಂದಣಿ ಸಂಖ್ಯೆ / Roll No :

| | | | | | |
|---|---|---|---|---|---|
| | | | | | |

ಪುಸ್ತಿಕೆಯ ಕ್ರಮಸಂಖ್ಯೆ
Booklet Serial No.

600247

(ಮೇಲಿನ ಕ್ರಮಸಂಖ್ಯೆಯನ್ನು ಪುಸ್ತಿಕೆಯ ಯಾವ ಭಾಗದಲ್ಲೂ ಬರೆಯಬಾರದು)
(Above Serial No. should not be written anywhere else in the booklet)

ವಿಷಯ/Subject : **155 - Compulsory Kannada ಕಡ್ಡಾಯ ಕನ್ನಡ**

ದಿನಾಂಕ / Date :

| | | |
|---|---|---|
| 12 | Jan | 2017 |

ಮಾಧ್ಯಮ / Medium : **Kannada ಕನ್ನಡ**

| ಸಂವೀಕ್ಷಕರ ಸಹಿ ಮತ್ತು ದಿನಾಂಕ<br>Invigilator's signature with date |
|---|
| |

SEAL

**ಅಭ್ಯರ್ಥಿಗಳಿಗೆ ಸೂಚನೆಗಳು**

ಈ ಪುಸ್ತಕವು 28 ಮುದ್ರಿತ ಪುಟಗಳನ್ನೊಳಗೊಂಡಿದೆ. ದಯವಿಟ್ಟು ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ಪರೀಕ್ಷಿಸತಕ್ಕದ್ದು. ದೋಷವಿದ್ದಲ್ಲಿ ಅದನ್ನು ಹಿಂದಿರುಗಿಸಿ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು. ಅಭ್ಯರ್ಥಿಗಳು ಪ್ರಶ್ನೆಗಳಿಗೆ ಉತ್ತರವನ್ನು ಬರೆಯುವ ಮೊದಲು ಈ ಪುಟದಲ್ಲಿರುವ ಸೂಚನೆಗಳನ್ನು ಕಡ್ಡಾಯವಾಗಿ ಓದಿ.

ಅಭ್ಯರ್ಥಿಯು ಪ್ರಶ್ನೆಗಳ ಉತ್ತರ ಪುಸ್ತಿಕೆಯಲ್ಲಿ ನಿಗದಿತ ಸ್ಥಳದಲ್ಲಿಯೇ ಉತ್ತರಗಳನ್ನು ಬರೆಯಿರಿ. ನಿಗದಿತ ಸ್ಥಳಕ್ಕಿಂತ ಹೊರಗೆ ಬರೆದ ಉತ್ತರಗಳಿಗೆ ಯಾವುದೇ ಅಂಕಗಳನ್ನು ನೀಡಲಾಗುವುದಿಲ್ಲ.

**Instructions for Candidates**

This booklet contains 28 printed pages. Please check that this Booklet does not have any misprint or torn or missing pages or items, etc. If so, get replaced by a fresh Booklet.

Candidates must read the instructions on this page and the following pages carefully before attempting the paper.

Candidates should attempt questions in the space prescribed under each question in the booklet. Any answer written outside the space allotted may not be given credit.

Question 2

ಈ ಕೆಳಕಂಡ ಗಾದೆಗಳಲ್ಲಿ ಎರಡರ ಅರ್ಥ ಸ್ವಾರಸ್ಯವನ್ನು ವಿವರಿಸಿ: ಅಂಕಗಳು:
(2x5=10 ಅಂಕಗಳು)

To be used by the evaluator only
ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

A) ಹುಟ್ಟುಗುಣ ಸುಟ್ಟರೂ ಹೋಗದು.

B) ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ.

C) ಉಂಡು ಮಾವು ತಿನ್ನು; ಹಸಿದು ಹಲಸು ತಿನ್ನು.

D) ಬೊಗಳುವ ನಾಯಿ ಕಚ್ಚುವುದಿಲ್ಲ.

| | | |
|---|---|---|
| **Question 1** | ಈ ಕೆಳಕಂಡ ವಾಕ್ಯಗಳಲ್ಲಿನ **ಕಾಗುಣಿತಾಕ್ಷರಗಳ** ತಪ್ಪುಗಳನ್ನು ತಿದ್ದಿ ಬರೆಯಿರಿ: **(5x2=10** ಅಂಕಗಳು**)** | |
| | A) ಬಾಸನು ಸಂಸ್ಕೃತದ ಪ್ರಶಿದ್ದ ನಟಕಕಾರ. | To be used by the evaluator only ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ |
| | B) ವೀರಗಾಶೆ ಕುಣಿಥ ಕರ್ನಾಟಕಧ ಜನಪಥ ಕಲೆ. | |
| | C) ಸಬರಿಯು ಶ್ರೀರಾಮನ ದರ್ಶನಕ್ಕಾಗಿ ಕದಿದ್ದಳು. | |
| | D) ಬೀಮನು ಬಕಾಶುರನನು ಕೊಂದನು. | |
| | E) ಬುದ್ದನು ಜಘತ್ತಿನ ಮಹಾನ್ ಚಿಂತಾಕರಲ್ಲಿ ಒಬ್ಬ. | |

Question 3

| ಈ ಕೆಳಕಂಡ ಯಾವುದಾದರೂ ಐದು ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ: (5x1=5 ಅಂಕಗಳು) | |
|---|---|
| A) ಜಯ | |
| B) ಅರ್ಥ | |
| C) ಸ್ಥಿರತೆ | |
| D) ಉತ್ತರ | |
| E) ನಾಲಾಯಕ್ಕು | |
| F) ವಿಫಲ | |
| G) ಅಹಂಕಾರ | |
| H) ಮೂರ್ತ | |
| I) ಕೃಪೆ | |
| J) ಆದಿ | |

To be used by the evaluator only
ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

ಭಾಗ – ?

**Question 4**

ಈ ಕೆಳಕಂಡ ಯಾವುದಾದರೂ **ಒಂದನ್ನು ಕುರಿತು 250–300** ಪದಗಳಲ್ಲಿ ಒಂದು ಪ್ರಬಂಧವನ್ನು ರಚಿಸಿ: **(1x15=15** ಅಂಕಗಳು)

A) ಪ್ರಸ್ತುತ ಸಮಾಜಕ್ಕೆ ಬುದ್ಧನ ಚಿಂತನೆಗಳ ಅಗತ್ಯ

B) ಪರಿಸರ ಸಂರಕ್ಷಣೆಯಲ್ಲಿ ನಾಗರಿಕರ ಪಾತ್ರ

C) ಕನ್ನಡ ಭಾಷೆ ಮತ್ತು ಸಾಹಿತ್ಯದ ಅನನ್ಯತೆ

| | |
|---|---|
| **ಆಯ್ಕೆ ಮಾಡಿದ ಪ್ರಬಂಧದ ಸಂಖ್ಯೆಯನ್ನು ಪಕ್ಕದಲ್ಲಿ ನೀಡಿರುವ ಜಾಗದಲ್ಲಿ ನಮೂದಿಸಿ.** | |

To be used by the evaluator only
ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

Question 5

| ಈ ಕೆಳಕಂಡ ಯಾವುದಾದರೂ ಐದು ಪದಗಳನ್ನು ಬಿಡಿಸಿ ಬರೆಯಿರಿ: **(5x2=10 ಅಂಕಗಳು)** <br> **ಉದಾ: ಕಾಲಿನ+ಅಡಿ=ಅಂಗಾಲು** | |
|---|---|
| A) ಅರಮನೆ | |
| B) ಅಂಗೈ | |
| C) ಹಿಮ್ಮಡಿ | |
| D) ಕೆಂದಾವರೆ | |
| E) ಇಮ್ಮಾವು | |
| F) ಮುಂಗಾಲು | |

To be used by the evaluator only
ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

**Question 6**

ಈ ಗದ್ಯಭಾಗದ ಮೂಲ ಅರ್ಥ ಕೆಡದಂತೆ **ಮೂರನೆಯ ಒಂದರಷ್ಟು** ಭಾಗಕ್ಕೆ ಸಂಕ್ಷೇಪಿಸಿ ಬರೆಯಿರಿ: **(1x10=10 Marks)**

To be used by the evaluator only
ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

ಹಿಂದೆ ನಮ್ಮ ಸಾಮಾಜಿಕ ಆವರಣದಲ್ಲಿ ಗುರು-ಹಿರಿಯರನ್ನು ಗೌರವಿಸಬೇಕೆಂಬ ಮೌಲ್ಯವೊಂದಿತ್ತು. ವಿದ್ಯೆ,

ಸ್ಥಾನಮಾನಗಳ ದೃಷ್ಟಿಯಿಂದ ಅಲ್ಲವಾದರೂ ವಯಸ್ಸಿನ ಹಿರಿತನದ ಕಾರಣಕ್ಕಾದರೂ, ಅವರಿಗೆ ಗೌರವ ಸಲ್ಲುತ್ತಿತ್ತು. ತಮ್ಮ ಬಗ್ಗೆ ಹಿರಿಯರು ತಪ್ಪು ಭಾವಿಸಿದಾಗ ಅದರ ಸತ್ಯಾಸತ್ಯತೆಯನ್ನು ವಿನಯಪೂರ್ವಕವಾಗಿ ಅವರಿಗೆ ಮನವರಿಕೆ ಮಾಡಿಕೊಡುವ ಸಂಸ್ಕೃತಿಯೂ ಇತ್ತು. ಈ ಬಗೆಯ ಸನ್ನಡತೆಯಿಂದ ಕಿರಿಯರ ಬಗ್ಗೆ ಹಿರಿಯರಲ್ಲಿ ಮತ್ತಷ್ಟು ಪ್ರೀತಿ-ಮಮಕಾರಗಳು ಮೂಡುತ್ತಿದ್ದವು. ಆದರೆ ಈ ಹೊತ್ತಿನ ಯುವಜನತೆ ಇಂಥ ಉತ್ಕೃಷ್ಟ ಸಂಸ್ಕೃತಿಯ ಮಾದರಿಗಳನ್ನು ಒಡೆದು ಚೂರಾಗಿಸಿದೆ. ಹಿರಿಯರು ಮುಂಚಿತವಾಗಿ ಹುಟ್ಟಿದ್ದು ಅಥವಾ ತಾವು ತಡವಾಗಿ ಜನಿಸಿದ್ದು ಇವರ ದೃಷ್ಟಿಯಲ್ಲಿ ಮಹತ್ವದ ವಿಷಯವಲ್ಲ. ತಾವು ಮೊದಲು ಹುಟ್ಟಿದ್ದರೆ ತಾವೇ ಇವರಿಗಿಂತ ಹಿರಿಯರಾಗುತ್ತಿದ್ದೆವು ಎಂಬುದು ಇವರ ಧೋರಣೆ. ಇಂಥ ಲಘು ಚಿಂತನೆಯೇ ಇವರ ವ್ಯಕ್ತಿತ್ವ ಮುಗ್ಗರಿಸಿ ಬೀಳುವಂತೆ ಅಡ್ಡಗಾಲು ಹಾಕಿ ಕೆಳಕ್ಕೆ ಕೆಡವುತ್ತದೆ. ಇದುವೇ ಇವರ ಸಂಸ್ಕೃತಿಯ ಅಧಃಪತನದ ಆರಂಭದ ಅವಸ್ಥೆಯಾಗುತ್ತದೆ.

| Question 7 | ಈ ಕೆಳಕಂಡ ನುಡಿಗಟ್ಟುಗಳಲ್ಲಿ **ಐದರ** ಅರ್ಥ ತಿಳಿಸಿ ಅವುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ: **(5x2=10 ಅಂಕಗಳು)** | |
|---|---|---|
| | | |
| A) ಕಳೆಗುಂದು | | To be used by the evaluator only ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ |
| B) ಬಾಯಿಬಿಡು | | |
| C) ಕಣ್ಣಿಡು | | |
| D) ಕೈಮಾಡು | | |
| E) ನಾಯಿಪಾಡು | | |
| F) ಕೈಜಾರು | | |

Question 8

ಈ ಕೆಳಕಂಡವುಗಳಲ್ಲಿ ಒಂದನ್ನು ಕುರಿತು ಪತ್ರ ಬರೆಯಿರಿ: **(1x15=15 ಅಂಕಗಳು)**

To be used by the evaluator only
ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

A) ನಿಮ್ಮ ಬಡಾವಣೆಯಲ್ಲಿನ ಕಸ ವಿಲೇವಾರಿಗೆ ಸಂಬಂಧಿಸಿದಂತೆ ಪೌರಾಯುಕ್ತರಿಗೆ ಮನವಿ ಪತ್ರವೊಂದನ್ನು ಬರೆಯಿರಿ.

**ಅಥವಾ**

B) ಸ್ನೇಹಿತರ ತಂದೆ ಮರಣ ಹೊಂದಿದ ಪ್ರಯುಕ್ತ ಆ ಸ್ನೇಹಿತರಿಗೊಂದು ಸಾಂತ್ವನ ಪತ್ರ ಬರೆಯಿರಿ.

(ನಿಮ್ಮ ಹೆಸರು ಮತ್ತು ನೋಂದಣಿ ಸಂಖ್ಯೆಯನ್ನು ಉತ್ತರದೊಂದಿಗೆ ಬರೆಯಬೇಡಿ.)

| Question 9 | | To be used by the evaluator only ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ |
|---|---|---|
| | ಈ ಕೆಳಕಂಡ **ಗದ್ಯ ಭಾಗವನ್ನು** ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸಿ: **(5x1=5 ಅಂಕಗಳು)**<br>ಪ್ರಾಚೀನ ಚರಿತ್ರೆಯನ್ನು ತೆರೆದ ಮನದಿಂದ ಅಧ್ಯಯನ ಮಾಡಿದಾಗ ಅದರ ಫಲಿತಗಳು ಸಕಾರಾತ್ಮಕವಾಗಿಯೇ ಕಾಣುತ್ತವೆ. ಅದರ ಪ್ರಕಾರ ಹೀಗೆ ಆಲೋಚಿಸಬಹುದು: ಬ್ರಾಹ್ಮಣರು ಆಧ್ಯಾತ್ಮ ಜ್ಞಾನದ ವಾಸುದಾರರು. ಅವರು ಸರಳ ಜೀವಿಗಳಾಗಿದ್ದು, ಜ್ಞಾನದ ಗಣಿಗಳಾಗಿ ಆಧ್ಯಾತ್ಮ ಜ್ಞಾನದ ಪ್ರಚಾರಕರೂ ಪ್ರತಿನಿಧಿಗಳೂ ಆಗಿದ್ದರು. ಕ್ಷತ್ರಿಯರು ತಮ್ಮ ತೋಳ್ಬಲದಿಂದ ಸಮಾಜವನ್ನು ರಕ್ಷಿಸುವುದು ಮತ್ತು ಸಮಾಜದ ಆಡಳಿತ ವ್ಯವಸ್ಥೆಯನ್ನು ಸುಗಮವಾಗಿ ನಡೆಸುವ ಕಾರ್ಯವನ್ನು ನಿರ್ವಹಿಸುತ್ತಿದ್ದರು. ನ್ಯಾಯವನ್ನು ಕಾಪಾಡುವುದು ಅವರ ಕರ್ತವ್ಯವಾಗಿತ್ತು. ವೈಶ್ಯರು ವಾಣಿಜ್ಯ ಧರ್ಮವನ್ನು ಪಾಲಿಸುತ್ತಾ ದುರಾಸೆಯನ್ನು ಬಿಟ್ಟು ಸಮಾಜಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಹಣವಿನಿಮಯ ಕಾರ್ಯದಲ್ಲಿ ತೊಡಗಿರುತ್ತಿದ್ದರು. ಶೂದ್ರರು ದೇಹವನ್ನು ದಂಡಿಸಿ ಸಮಾಜದ ಸೇವೆ ಮಾಡುತ್ತಿದ್ದರು. ಈ ವೃತ್ತಿಗಳಲ್ಲಿ ಯಾವುದೂ ಮೇಲು ಕೀಳೆನಿಸದೆ ಸಮಾನವಾದ ವೃತ್ತಿಗೌರವವನ್ನು ಪಡೆದಿದ್ದವು. ಇವು ಕ್ರಮೇಣ ಜಾತಿಗಳಾಗಿ ಮಾರ್ಪಟ್ಟು ಹಿಂದೂ ಧರ್ಮದ ಮೂಲವನ್ನೇ ಅಲ್ಲಾಡಿಸುವ ಮಟ್ಟಕ್ಕೆ ಬೆಳೆದು ಬಂದವು. | |
| | A) ಬ್ರಾಹ್ಮಣರು ಯಾವ ಯಾವ ಕಾರ್ಯಗಳನ್ನು ನಿಭಾಯಿಸುತ್ತಿದ್ದರು? | |
| | B) ಕ್ಷತ್ರಿಯರ ಕರ್ತವ್ಯ ಯಾವುದಾಗಿತ್ತು? | |

C) ದುರಾಸೆಯಿಲ್ಲದೆ ಸಾಮಾಜಿಕ ಸೌಕರ್ಯಗಳನ್ನು ಒದಗಿಸುತ್ತಿದ್ದವರು ಯಾರು?

D) ಸಮಾಜದ ಸೇವೆ ಯಾರ ಹೊಣೆಯಾಗಿತ್ತು?

E) ಧರ್ಮದ ಮೂಲವನ್ನೇ ಅಲುಗಾಡಿಸುತ್ತಿರುವ ಪರಿಕಲ್ಪನೆಗಳು ಯಾವುವು?

Question 10

ಈ ಕೆಳಕಂಡ ಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ: (1x10=10 ಅಂಕಗಳು)

To be used by the evaluator only
ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

In the past only the people were striving to develop Kannada. Now, the governments too are providing the financial support along with them. As such the required literature is being created in all the areas of communication in Kannada. If this trend continues, if our unity is not affected due to the craze for other languages, the future of Kannada is certainly bright. In spite of all this, even with the publication of enormous literature, only a handful of people are benefitted by this. Because in our country, all the people cannot read and even those who can read not all can understand it. They cannot read it, because they do not have books they are not used to buying books. Those who buy books and read them, do not communicate it to their less fortunate ones. As a result, the literature created is poor, and the people without getting any benefit out of it, remain poor.